
ತಪ್ಪು ಮಾಡದ ಪ್ರಕಾಶನನ್ನು ಕೊಂದ ಗೋಪಾಲ, ವಿಜಯ ಸಾಕ್ಷಿಗಳ ಕೊರತೆಯ ಕಾರಣ ಶಿಕ್ಷೆಯಿಂದ ನುಣುಚಿಕೊಂಡರು. ಈಗಲೂ ರಾಜಾರೋಷದಿಂದ ಅಡ್ಡಾಡುವುದು ನೋಡಿ ನನಗೆ ಈ ಮನುಷ್ಯರದು ಅದೆಂಥ ಹೇಸಿಗೆಯ ಜೀವನಂತಾ ಅನಿಸುತ್ತೆ' ಎಂದು ಒಂದು ದೀರ್ಘ ನಿಟ್ಟುಸಿರು ಬಿಟ್ಟರು ಕ್ಯಾಪ್ಟನ್ ಪ್ರತಾಪ್ ಮೋಹನ್.

ಮುಂದೆ ಮತ್ತೆ ಜಗದೀಶನ ಕಡೆ ನೋಡುತ್ತಾ, 'ಜಗದೀಶರವರೇ, ನನಗ ನಿನ್ನೆ ನಡದ ಶಶಿರೇಖಾಳ ಕೇಸೂ ಹಿಂಗ ಆಗತೈತಂತ ಮನಸಿಗೆ ಬ್ಬಾಳ ಬ್ಯಾಸರ ಆಗೈತಿ. ಯಾವತ್ತೂ ಇಂತಾ ಅನ್ಯಾಯ ನಡೀಬಾರ್ದು. ಆ ಪಾಪಿಗೆ ಶಿಕ್ಷಾ ಆಗಬೇಕು.'

'ಹೌದು ಸರ್, ಈ ಕೇಸನ್ಯಾಗ ನ್ಯಾಯ ಸಿಗ್ಲೆಬೇಕ. ಅದಕ್ಕೆಲ್ಲಾ ನಾನ ಕೋಶಿಸ್ ಮಾಡ್ತೀನಿ...'



'ಆ ಕೆಲಸ ಮದಲ ಆಗಲಿ. ಇಲ್ಲಾಂದ್ರ ಭವ್ಯ ಭವಿಷ್ಯ ಇದ್ದ ಆ ಮಗಳ ಆತ್ಮಕ್ಕ ಖಂಡಿತ ಶಾಂತಿ ಸಿಗಾಂಗಿಲ್ಲ...'

'ಹೌದ ಸರ್, ನಸಕಿನ್ಯಾಗ ಅಂತಾ ದುರ್ಘಟನಾ ಅದೆಂಗ ಆಯ್ತಂತ...ಅಷ್ಟ ನಸುಕಿನ್ಯಾಗ ಅವಳ್ಯಾಕ ಅಲ್ಲಿಗೆ ಬಂದಿದ್ದಳ.. ಕೊಲೆಗೆ ಕಾರಣಾದ್ರೂ ಏನ ಎಂಬ ಪ್ರಶ್ನೆಗಳು ನನ್ನನ್ನ ಕಾಡ್ತಾವ ಸರ್..'

'ನಿಮ್ಮ ಮಾತು ಖರೇಯದ. ಅಂತಾ ನಸುಕಿನ್ಯಾಗ ಬರೂದಕ್ಕ, ಕೊಲೆಯ ಹಿಂದಿನ ಕಾರಣ ಹೇಳಿದ್ರ ನಿಮಗೆಲ್ಲ ದಿಗಿಲ ಆಗತೈತಿ. ಅದರ ಹಿಂದಿನ ಪೂರಾ ಮಜಕೂರ ನಿಮಗ ಹೇಳ್ತಿನಿ ಕೇಳ್ರಿ' ಎನ್ನುತ್ತಾ ಆ ಕಥೆಯನ್ನು ಹೇಳಲು ಶುರು ಮಾಡಿದರು.

*

ಆ ಯುವತಿ ಹೆಸರು ಶಶಿರೇಖಾ. ಆ ಹುಡುಗನ ಹೆಸರು ಚಂದ್ರಶೇಖರ. ಆತ ಇದೇ ಊರಿನವನು. ಶಶಿರೇಖಾ ಪಕ್ಕದೂರಿನ ಶ್ರೀಮಂತ ಮನೆತನದ ಹೆಣ್ಣುಮಗಳು. ಡಿಗ್ರಿ ಅಂತಿಮ ವರ್ಷದಲ್ಲಿ ಓದುತ್ತಿದ್ದವಳು. ಈತನು ಇದೇ ಊರಲ್ಲಿ ಡಿಗ್ರಿ ಓದುತ್ತಾ ಇದ್ದವನು. ಸ್ವಾರಸ್ಯಕರ ಸಂಗತಿಯೆಂದರೆ ಇಬ್ಬರೂ ಸಂಬಂಧಿಕರಾಗಬೇಕು.

ಆರಂಭದಲ್ಲಿ ಶಶಿರೇಖಾಳನ್ನು ಚಂದ್ರಶೇಖರನಿಗೆ ಕೊಟ್ಟು ವಿವಾಹ ಮಾಡಬೇಕೆಂಬ ವಿಚಾರ ಇತ್ತಂತೆ. ಆದರೆ, ಬರುಬರುತ್ತಾ ಆತ ಕಾಲೇಜ್ ಕಲಿಕೆಯಲ್ಲಿ ನಿರ್ಲಕ್ಷ್ಯತೋರುತ್ತಾ ಪೋಲಿಯಾಗಿ ಅಲೆಯುತ್ತಿದ್ದರಿಂದ ಸಹಜವಾಗಿ ಶಶಿರೇಖಾಳ ಮನೆಯಲ್ಲಿ ಅವರಿಬ್ಬರ ಮದುವೆ ಬೇಡವೆಂದು ತೀರ್ಮಾನಿಸಿದ್ದಾರೆ. ಆದರೆ, ತುಂಬಾ ಆಸ್ತಿ ಇದ್ದ ಮನೆತನ ಕೈ ಬಿಟ್ಟು ಹೋಗುತ್ತಲ್ಲಾ ಎಂದು ಚಂದ್ರಶೇಖರ ಶಶಿರೇಖಾಳನ್ನು ಮದುವೆಗೆ ಒತ್ತಾಯಿಸಿದ್ದಾನೆ. ಇನ್ನೊಂದು ಸಂಗತಿ ಎಂದರೆ ಅವಳು ತನ್ನ ತಂದೆಯೊಡನೆ ಮೊನ್ನೆ ಬಂದಿದ್ದು ಚಂದ್ರಶೇಖರನ ಮನೆಗೆ. ಯಾವುದೋ ಪರೀಕ್ಷೆಯ ವಿಷಯವಾಗಿ ಅವರಿಬ್ಬರೂ ತಮ್ಮೂರಿನಿಂದ ಬಂದಿದ್ದು. ಎಷ್ಟೇ ಆಗಲಿ ಅದು ಅವಳ ಸೋದರತ್ತೆ ಮನೆ. ಹೀಗಾಗಿ ಅವಳು ಯಾವುದೇ ಅಳುಕಿಲ್ಲದೆ ಬಂದಿದ್ದು, ಅಲ್ಲಿಯೇ ಇದ್ದದ್ದು. ಆದರೆ, ಆ ದಿನ ರಾತ್ರಿ ವೇಳೆ ಚಂದ್ರಶೇಖರ ಮದುವೆ ಬಗ್ಗೆ ಕೇಳಲಾಗಿ ಅವಳು ಅದಕ್ಕೆ ಒಪ್ಪಿಲ್ಲ. ಆ ಕಾರಣದಿಂದಲೇ ಮನೆಯಲ್ಲಿ ಮಾತನಾಡಲು ಆಗುವುದಿಲ್ಲ, ಅದಕ್ಕೆ ನಾಳೆ ಮುಂಜಾನೆ ಅಂತಿಮವಾಗಿ ನಿನ್ನ ನಿರ್ಧಾರ ತಿಳಿಸಿ ಹೋಗು ಎಂದು ಈ ಜಾಗಕ್ಕೆ ಬರಲು ಅವಳಿಗೆ ಹೇಳಿದ್ದಾನೆ.

ಅದರಂತೆ ಅವಳು ನಸುಕಿನಲ್ಲಿ ನನ್ನೆದುರಿನ ಗಾರ್ಡನ್‌ಗೆ ಬಂದು ಅಲ್ಲಿನ ಕಟ್ಟೆಯ ಮೇಲೆ ಕೂತಾಗ ಆತ ತನ್ನ ಮಾತು ಶುರು ಮಾಡಿದ, 'ನೋಡ ಶಶಿ ಮನಿಯಾಗ ಹಿಂದ ಹಿರಿಯರೆಲ್ಲ ಕೂಡಿ ಮಾಡಿದ ತೀರ್ಮಾನ ಮುರಿಯೋದು ಛಲೋ ಅಲ್ಲ. ನಾವಿಬ್ರೂ ಮದುವೆಯಾಗಿ ಆರಾಮಾಗಿ ಇರಬೌದಲಾ..?'

'ನಿನ್ನ ಕೂಡಾ ಮದುವಿ ಆಗಿ ಆರಾಮಾಗಿ ಇರ್ತಿನಿ ಅನ್ನೂದು ಕನಸಿನ ಮಾತ...'

'ಹಂಗ್ಯಾಕ ತಿಳ್ಕೊಂಡಿ ನೀ. ನೋಡು ಮನೆಯಾಗ ನನ್ನ ಬಗ್ಗೆ ಯಾರೋ ತಪ್ಪಾಗಿ ಹೇಳ್ಯಾರ. ಅವ್ರು ಅದನ್ನ ನಂಬ್ಯಾರ. ನೀನಾದ್ರೂ ಅರ್ಥ ಮಾಡಿಕೋ ಶಶಿ..'

'ನಾ ಅರ್ಥ ಮಾಡಿಕೊಂಡಿದ್ದಕ ಈ ತೀರ್ಮಾನಕ್ಕ